www.ecourtsindia.com

ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸಂಡೂರು.

ಸಿ. ಸಿ. ಸಂಖ್ಯೆ **22/2022** ಸಿ.ಡಬ್ಲ್ಯೂ **05 / ಪಿ.ಡಬ್ಲ್ಯೂ 03**

ಸಾಕ್ಷಿಯ ಹೆಸರು - ವಿರೂಪಣ್ಣ

ತಂದೆಯ ಹೆಸರು - ವೀರಭದ್ರಪ್ಪ

ವಯಸ್ಸು - 42 ವರ್ಷ

ಉದ್ಯೋಗ - ವ್ಯವಸಾಯ

ವಾಸ ಸ್ಥಳ - ಭುಜಂಗ ನಗರ

ದಿನಾಂಕ 25-06-2024 ರಂದು ಪ್ರಮಾಣ ವಚನ ಮಾಡಿಸಲಾಯಿತು.

**ಮುಖ್ಯ ವಿಚಾರಣೆ ಸಸಅ ರವರಿಂದ**

* * * *

ಈ ಪ್ರಕರಣದ ಬಗ್ಗೆ ನನಗೆ ಏನು ಗೊತ್ತಿರುವುದಿಲ್ಲ. ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಯಾವುದೇ ಹೇಳಿಕೆ ಪಡೆದಿರುವುದಿಲ್ಲ.

**ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲನ್ನು ಮಾಡಲು ಮಾನ್ಯ ಸಸಅ ರವರು ಅನುಮತಿ ಕೋರಿರುತ್ತಾರೆ, ಅನುಮತಿಸಲಾಯಿತು**.

**ಪಾಟೀ ಸವಾಲು**: **ಮಾನ್ಯ ಸ.ಸ.ಅ. ರವರಿಂದ**.

ದಿಃ **24-08-2021** ರಂದು ನಾನು ಮಧ್ಯಾಹ್ನ **1-00** ಗಂಟೆಗೆ ಪುರಸಭೆ ಬಸ್ ನಿಲ್ದಾಣದ ಹತ್ತಿರ ಟೀ ಕುಡಿಯಲು ಹೋಗಿದ್ದಾಗ ಪೊಲೀಸರು ಅಲ್ಲಿಗೆ ಬಂದಿದ್ದು ಮತ್ತು ಬೆಂಗಳೂರು ಬೇಕರಿ ಬಳಿ ಸಾರ್ವಜನಿಕ ಸ್ಥಳದಲ್ಲಿ ಆರೋಪಿತರು ಮಟ್ಕಾ ಚೀಟಿಗಳನ್ನು ಬರೆದುಕೊಡುತ್ತಾ ಹಣವನ್ನು ಪಡೆಯುತ್ತಿದ್ದರು ಆಗ ಪೊಲೀಸರು ಅಲ್ಲಿ ಇರುವ ಆರೋಪಿತರನ್ನು ಹಿಡಿದಿರುತ್ತಾರೆ ಮತ್ತು ಅಲ್ಲಿದ್ದ ಜನರು ಓಡಿ ಹೋಗಿರುತ್ತಾರೆ ಎಂದರೆ ಸರಿಯಲ್ಲ. ತದ ನಂತರ ಪೊಲೀಸರು ಆರೋಪಿತರ ಅಂಗ ಶೋಧನೆ ಮಾಡಿ ಅವರಿಂದ ಒಂದು ಪೆನ್, ಮಟ್ಕಾ ಪಟ್ಟಿ ಮತ್ತು ರೂ. **1,230/-** ಹಣ ಜಪ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಈ ರೀತಿ ನಾನು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯ ಹೇಳಿಕೆಯನ್ನು ನಿ.ಪಿ **1** ಎಂದು ಗುರುತಿಸಲಾಯಿತು. ನಾನು ನಿ.ಪಿ **1** ರಂತೆ ಹೇಳಿಕೆ ನೀಡಿದ್ದರು ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು**: **ಆರೋಪಿ ಪರ ವಕೀಲರಿಂದ ಏನು ಇರುವುದಿಲ್ಲ**.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ.

**ಪ್ರ.ದ.ನ್ಯಾ.ದಂ., ಸಂಡೂರು**.

This is a True Copy of the Court Records Online. Authenticated @ districts.ecourtsindia.com/cnr/KABI600000632022/truecopy/order-3.pdf